ಶ್ರೀ ಡಿ. ಟಿ. ಮಾಯಣ್ಣ.—ಮಾನ್ಯ ಮಂತ್ರಿಗಳು ತಾವೇ ಸ್ವತಃ ಹೋಗಿ ನಮ್ಮ ಬೌಂಡರಿಯಲ್ಲಿ ಎಷ್ಟು ಪ್ರದೇಶ ಅಕ್ರಮಣವಾಗಿದೆ ಎನ್ನುವುದನ್ನು ನೋಡಿ ಇನ್ನು ಮುಂದೆ ಅಕ್ರಮಣವಾಗುವುದನ್ನು ನಿಲ್ಲಿಸಿ, ಫಾರೆಸ್ಟನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಮಾದೇಗೌಡ.—ನಾನು ಆಗಲೇ ಹೋಗಿ ನೋಡಿದ್ದೇನೆ ಮಾನ್ಯ ಸದಸ್ಯರು ಮತ್ತೊಮ್ಮೆ ಹೋಗಲು ಹೇಳುತ್ತಿದ್ದಾರೆ, ಅಲ್ಲಿ ಏನಾದರೂ ಅಂಥ ಚಟುವಟಿಕೆಗಳು ನಡೆಯುತ್ತಿದ್ದರೆ ಅದನ್ನು ತಡೆಹಿಡಿಯುವುದಕ್ಕೆ ನಾನು ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

Qn. 571 (766)

SRI MALLIKARJUN M. KHARGE.—This file has gone to P.S.C. in connection with amendment to the recruitment rules. I request the Chair that this question may please be withheld.

MR. SPEAKER.—Yes. The question is withheld.

Grant of Industrial Licences for starting of Small Scale Industries.

96. SRI S. S. ARAKERI (Balloli).—Will the Minister for Food and Civil Supplies be pleased to state :—

(a) number of licences issued for starting of Small Scale Industries in Karnataka from January 1980 (please furnish list with figures) ;

(b) number of licences issued to SC and ST persons from January 1980 to upto date (please furnish details with figures) ;

(c) the conditions imposed at the time of issuing the licences to start Small Scale Industries ;

(d) whether the relaxation are given to SC/ST Entrepreneurs in conditions while issuing licences to encourage them ;

(e) if not, state the reasons ?

SRI MANIKRAO PATIL (Minister for Food and Civil Supplies).—

(a) Small Scale Industries do not require industrial licences. Details of provisional registration certificates issued to Small Scale Industries by the Directorate of Industries and Commerce are as follows :—

1980-81	...	5227	8504
1981-82	...	3277	

It is difficult to furnish a list of 8504 units.

(b) As already stated no licences are required to start small scale industries.

This information pertaining to provisional registration certificate is not available, since this statistics has not been maintained till

now. However, the District Officers have been directed to maintain these statistics in future.

(c) The entrepreneurs should submit along with the application, the Project Report for which the applicant desires to start the industry and the datails regarding raw materials involved in their manufacturing process.

(d) Since the conditions for issue of provisional registration certificates are very few, no relaxation has been made for SC/ST Entrepreneurs. However the Department of Ind. & Com. has relaxed the stipulation to issue provisional registration certificate for Iron & Steel based Fabrication units within Bangalore Corporation limits in so far as SC/ST Entrepreneurs are concerned, which has been banned for others by the Directorate of Ind. & Commerce.

(e) Does not arise in view of the reply given to (d).

ಶ್ರೀ ಎಸ್.ಎಸ್. ಆರಕೇರಿ.—ತಮ್ಮ ಉತ್ತರದಲ್ಲಿ ೧೯೮೦-೮೧, ೧೯೮೧-೮೨, ಈ ಎರಡೂ ವರ್ಷದ್ದೂ ಕೂಡಿ ಸುಮಾರು ೮೫೦೪ ಅಲ್ಪ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಪರವಾನಿಗೆಗಳನ್ನು ಹರಿಜನ ಗಿರಿಜನರಿಗೆ ನೀಡಲಾಗಿದೆ ಎಂದು ಹೇಳಿದ್ದೀರಿ. ದಯಮಾಡಿ ಜಿಲ್ಲಾವಾರು ಎಷ್ಟು ಎಷ್ಟು ಜನರಿಗೆ ಈ ಪರವಾನೆಯನ್ನು ಕೊಟ್ಟಿದ್ದೀರಿ ಎಂದು ತಿಳಿಸುತ್ತೀರಾ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಸಧ್ಯದಲ್ಲಿ ಆ ಮಾಹಿತಿ ನನ್ನಲ್ಲಿಲ್ಲ ಬಹುಶಃ ಇಂಡಸ್ಟ್ರೀಸ್ ಡಿವ್ಯಾಂಡ್ ಬಂದಾಗ ಮಾನ್ಯ ಸದಸ್ಯರು ಕೇಳುವಂಥಪಟ್ಟಿಯನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಎಸ್.ಎಸ್ ಆರಕೇರಿ.— ಮಾನ್ಯ ಸಚಿವರು ಜಿಲ್ಲಾವಾರು ಪಟ್ಟಿಯನ್ನು ಕೊಡುವುದಕ್ಕೆ ಸಮಯ ಕೇಳುತ್ತಿದ್ದಾರೆ. ಪ್ರಶ್ನೆಗೆ ಸಂಬಂಧಪಟ್ಟ ಮಾಹಿತಿ ಅವರಲ್ಲಿಲ್ಲದ್ದಿರೆ ಹೇಗೆ ? ದಯಮಾಡಿ ಜಿಲ್ಲಾವಾರು ಪಟ್ಟಿಯನ್ನು ಒದಗಿಸಬೇಕು ಎಂದು ಕೇಳುತ್ತೇನೆ,

ಶ್ರೀ ಮಾಣಿಕ್‌ರಾವ್ ಪಾಟೀಲ್.—ಕನ್‌ಸಾಲಿಡೇಟೆಡ್ ಆಗಿ ೮೪೦೫ ಜನ ರಿಜಿಸ್ಟರ್ ಮಾಡಿಕೊಂಡಂಥ ಪಟ್ಟಿ ಇದೆ. ಮಾನ್ಯ ಸದಸ್ಯರು ಬೈಫಕೇಟ್ ಮಾಡಿ, ಜಿಲ್ಲಾವಾರು ಅಂಕಿಅಂಶಗಳನ್ನು ಕೇಳುತ್ತಿದ್ದಾರೆ. ಇಂಡಸ್ಟ್ರೀಸ್ ಡಿಮ್ಯಾಂಡ್ ಬಂದಾಗ ಮಾನ್ಯ ಸದಸ್ಯರು ಯಾವ ಪಟ್ಟಿಯನ್ನು ಕೇಳುತ್ತಾರೋ ಅದನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀ ಎಸ್.ಎಸ್. ಆರಕೇರಿ.—ತಾವು ಏನು ೮೪೦೫ ಜನ ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಿದ್ದೀರೋ ಅವರಿಗೆ ಲೈಸೆನ್ಸ್ ಇನ್ನೂ ಕೊಟ್ಟಿಲ್ಲ. ತಮ್ಮ ಮುಖಾಂತರ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ, ಕೈಗಾರಿಕಾ ಇಲಾಖೆಯವರು ನಮ್ಮ ಜಿಲ್ಲೆಗಳಲ್ಲಿ ಎಷ್ಟು ಜನ ನಿರುದ್ಯೋಗಿ ಪದವೀಧರರು ಇದ್ದಾರೋ ಅವರಿಗೆ ಈ ವಿಷಯದಲ್ಲಿ ಸರಿಯಾದಂಥ ಉತ್ತೇಜನ ಕೊಡುತ್ತಿಲ್ಲ, ಎಷ್ಟು ಜನರಿಗೆ ತಾವು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಲೈಸೆನ್ಸ್‌ನ್ನು ಕೊಟ್ಟಿದ್ದೀರಿ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಯಾವುದೇ ತರಹ ಲೈಸೆನ್ಸ್‌ನ್ನು ಇವರು ಪಡೆದುಕೊಳ್ಳುವುದು ಅವಶ್ಯಕ ಇಲ್ಲ. ಬರೀ ರಿಜಿಸ್ಟ್ರೇಷನ್‌ನ್ನು ಇವರು ಮಾಡಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಹಿಂದುಳಿದವರಿಗೆ ಮತ್ತು ದಲಿತರಿಗೆ ಈ ವಿಷಯದಲ್ಲಿ ಇಲಾಖೆಯಿಂದ ಉತ್ತೇಜನ ಸಿಕ್ಕುತ್ತಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ನಾವು ಹಿಂದುಳಿದ ವರ್ಗದವರನ್ನು ಮತ್ತು ದೀನದಲಿತರನ್ನು ಇದರ ಬಗ್ಗೆ ಸಾಕಷ್ಟು ಉತ್ತೇಜನ ಕೊಡುತ್ತಿದ್ದೇವೆ ಇದು ನಮ್ಮ ಕಮಿಟ್‌ಮೆಂಟ್, ಆದರೆ ಅವರು ಮುಂದೆ ಬರುವುದು ಅಪರೂಪವಾಗಿದೆ. ಅವರು ಮುಂದೆ ಬಂದರೆ ನಾವು ರಿಜಕ್ಟ್ ಮಾಡುವ ಹಾಗೆಯೇ ಇಲ್ಲ, ಅವರಿಗೆ ಇಮಿಡಿಯೇಟ್ ಆಗಿ ರಿಜಿಸ್ಟ್ರೇಷನ್ ಮಾಡಿಸಿ, ಸರ್ಟಿಫಿಕೇಟನ್ನು ಇಷ್ಯೂ ಮಾಡುತ್ತೇವೆ.

ಶ್ರೀ ವಿ.ವಿ. ಪತ್ತಾರ್.—ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ, ಹಿಂದುಳಿದವರಿಗೆ ಲೈಸೆನ್ಸ್‌ನ ಅವಶ್ಯಕತೆ ಇಲ್ಲವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಪವರ್‌ಲೂಂ ಹಾಕುವಂಥಾದ್ದು ಸಹ ಸಣ್ಣ ಕೈಗಾರಿಕೆಯಲ್ಲಿ ಬರುತ್ತದೆ. ಇದಕ್ಕೆ ಎರಡು ರೀತಿಯ ಲೈಸೆನ್ಸ್ ಬೇಕಾಗುತ್ತದೆ. ಒಂದು ಟೆಕ್ಸ್‌ಟರ್ಸ್‌ಗೆ ಲೈಸೆನ್ಸ್, ಇನ್ನೊಂದು ಎಲ್-ಳ ಲೈಸೆನ್ಸ್, ಟೆಕ್ಸ್‌ಟರ್ಸ್ ಲೈಸೆನ್ಸ್ ಇಲ್ಲದೆ ಪವರ್‌ಲೂಂನ್ನು ಹಾಕುವುದಕ್ಕೆ ಪರವಾನೆಯನ್ನು ಕೊಡಬಾರದು ಎಂದು ಕೇಂದ್ರ ಸರ್ಕಾರದ ನಿಯಮ ಇದೆ. ಆದರೂ ಸಹ ಎಲ್-ಳ ಲೈಸೆನ್ಸ್‌ನ್ನು ರಾಜ್ಯ ಸರ್ಕಾರದವರು ಕೊಡುವುದು ಇದೆ. ಟೆಕ್ಸ್‌ಟರ್ಸ್ ಲೈಸೆನ್ಸ್ ಕೊಡದಿದ್ದರೆ ಎಲ್-ಳ ಲೈಸೆನ್ಸ್ ಕೊಡುವಂಥಾದ್ದನ್ನು ಸ್ಥಗಿತ ಮಾಡುತ್ತೀರಾ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಅಧ್ಯಕ್ಷರೇ, ಕೆಲವು ಕೈಗಾರಿಕೆಗಳಿಗೆ ಪರ್ಮಿಷನ್ ಅಥವಾ ರಿಜಿಸ್ಟ್ರೇಷನ್ ಕೊಡುವುದಾಗಲೀ, ಅದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಅದೇ ರೀತಿಯಲ್ಲಿ ಬಹುಶ: ಟೆಕ್ಸ್‌ಟ್ಟಯಲ್ ಇಂಡಸ್ಟ್ರಿ ಕೂಡ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ಅದು ನಮಗೆ ಸಂಬಂಧಿಸಿದ್ದು ಅಲ್ಲ. ಇನ್ನು ಬ್ಯಾನ್ಡ್ ಐಟಮ್‌ಗಳ ಬಗ್ಗೆ ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಅದು ಸತ್ಯಕ್ಕೆ ದೂರವಾದ ಮಾತು. ಸಮಯಕ್ಕೆ ಸರಿಯಾಗಿ ವಿಭಾಗೀಯ ಅಲ್ಪ ಪ್ರಮಾಣದ ಕೈಗಾರಿಕೆ ಸಂಸ್ಥೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಾರೆ. ಹೀಗಿರುವಾಗ ಬ್ಯಾನ್ಡ್ ಐಟಮ್‌ಗಳು ಉಪಯೋಗವಾಗುವುದೇ ಇಲ್ಲ. ಅದೂ ಅಲ್ಲದೆ. ಅಂತಹ ಕೈಗಾರಿಕೆಗಳಿಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೂಡ ರಾಜ್ಯ ಸರ್ಕಾರದವರು ವಿತರಣೆ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಅರಕೇರಿ.—ಸನ್ಮಾನ್ಯ ಸಚಿವರು ಆಯಾಯ ತಾಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಹರಿಜನ ಗಿರಿಜನರಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಪರವಾನಗಿ ಕೊಡುತ್ತಿಲ್ಲ ಎನ್ನುವುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿದ್ದಾರೆ. ಇಡೀ ೨೦ ಜಿಲ್ಲೆಯೊಳಗೆ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನೋಂದಣಿ ಪ್ರಮಾಣ ಪತ್ರಗಳನ್ನು ಪಡೆದಿದ್ದಾರೆ ? ಮೇಲಾಗಿ ಇದನ್ನು ರಾಷ್ಟ್ರೀಯ ಧೋರಣೆಯ ಯೋಜನೆಯೆಂದು ಏನು ಹೇಳಿದ್ದೀರಿ, ಇದು ನಿಜವಾಗಿಯೂ ಸಂತೋಷವಾಗುತ್ತದೆ. ಹಾಗಾದರೆ, ಆಯಾಯ ತಾಲೂಕು, ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಎಷ್ಟು ಜನರು ಈ ಅಲ್ಪ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ತಯಾರಾಗಿದ್ದಾರೆ ಎನ್ನುವ ಗುರುತಿಸಿದ ಪಟ್ಟಿಯನ್ನು ಕೊಡುತ್ತೀರಾ ?

SRI MANIK RAO PATIL.—I have already mentioned that we are not maintaining any seperate list for the SCs/STs. I have assured the Members that no such application has been rejected. Anyway, I categorically assure on behalf of the Government that if any Hon. Member suggests any name of persons belonging to SCs/STs, I will dispose it of within a month. and try to see that the registration and licence is issued without any further delay.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಮಂತ್ರಿಗಳು ಇದು ಸತ್ಯಕ್ಕೆ ದೂರವಾದ ಮಾತೆಂದು ಹೇಳುತ್ತಿದ್ದಾರೆ. ನಾಲ್ಕು ಜನ ಅಧಿಕಾರಿಗಳು ಹೇಳಿದ ಮಾತನ್ನು ಕೇಳಿ ಮಾನ್ಯ ಮಂತ್ರಿಗಳು ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ಇದು ನನಗೆ ಗೊತ್ತಿರುವುದರಿಂದ ನಾನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ಈ ಲೈಸೆನ್ಸ್‌ನ್ನು ಕೊಡತಕ್ಕವರು ಯಾರು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳು ಹೇಳುವುದು ಸರಿಯಲ್ಲ ಎಂದು ಹೇಳಬಾರದು.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಮಂತ್ರಿಗಳು ಹೇಳುವುದು ಸತ್ಯಕ್ಕೆ ದೂರವಾದ ಮಾತು ಎಂಬುದನ್ನು ನಾನು ಅನುಭವದಿಂದ ಹೇಳುತ್ತಿದ್ದೇನೆ. ಆದ್ದರಿಂದ ಎಲ್ (ಳ) ಮತ್ತು ಟೆಕ್ಸ್ ಮಾರ್ಕ್ ಲೈಸೆನ್ಸ್ ಕೊಡುವಾಗ ಹರಿಜನ ಗಿರಿಜನರನ್ನು ಗಮನದಲ್ಲಿಟ್ಟುಕೊಳ್ಳುತ್ತೀರಾ

SRI MANIK RAO PATIL.—With due regard to the hon. Membe I say that I never meant that he is irresponsible. I am only talking with reference to the authentic records which are available

with me. Probably, he might have received the information from some unknown sources, about which I do not know how for it is authentic. I only said that certain regulations come directly under the purview of the Government of India, the Government of Karnataka has never ventured to issue licences to such of the banned items.

ಶ್ರೀ ಎಸ್.ಎಸ್. ಅರಕೇರಿ.—ಈಗ ಇಡೀ ರಾಜ್ಯದಾದ್ಯಂತ ಹಳ್ಳಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಏನಿದ್ದಾರೆ ಅವರಿಗೆ ರಾಷ್ಟ್ರೀಯ ಧೋರಣೆ ಅನ್ವಯ ಅಲ್ಪ ಪ್ರಮಾಣದ ಕೈಗಾರಿಕೆಯಲ್ಲಿ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರನ್ನು ಐಡೆಂಟಿಫೈ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಇದೆಯಾ

ಶ್ರೀ ಮಾಣಿಕ್‌ರಾವ್ ಪಾಟೀಲ್.—ಪ್ರತಿ ಜಿಲ್ಲೆಯಲ್ಲೂ, ಈಗ ಈ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಪ್ರತಿ ಜಿಲ್ಲೆಯಲ್ಲಿಯೂ ಸೆಮಿನಾರ್, ಮತ್ತು ಮೀಟಿಂಗ್‌ಗಳ ಮುಖಾಂತರ ನಿರುದ್ಯೋಗ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಂತಹ ಮಾಹಿತಿಗಳನ್ನು ಕೊಡುತ್ತಿದ್ದಾರೆ. ಮುಂದಕ್ಕೂ ಕೂಡ ಇದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತೇವೆ.

Amount Collected for Educational fund in KSRTC.

1066 SRI PAMAPATHY (Davangere).—Will the Minister for Transport and Minor Irrigation be pleased to state.—

(a) whether any amount is recovered from KSRTC Employees towards the Educational Fund of Employees Children

(b) if so the total amount collected and spent for the purpose

(c) the benefits given to the Children out of this amount

SRI M.M. J. SADYOJATHA Minister for Transport and Minor Irrigation.—

(a) Yes. (Rs. 1 is recovered every month from each employee).

(b) Rs. 15,293-20 collected upto the end of March 82. No amount has been spent so far.

(c) The formulation of the Scheme regarding Educational Assistance to the Children of the employees is being discussed with the Labour Representatives and finalised. In the meantime no amount has been spent in this behalf.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಕೆ.ಎಸ್.ಆರ್.ಟಿ.ಸಿ. ಯಲ್ಲಿ ನೌಕರರಿಂದ ತಲಾ ೧ ರೂಪಾಯಿಯಂತೆ ವಸೂಲು ಮಾಡಿ ೧೫,೧೯,೨೫೯-೨೦ ರೂಪಾಯಿಗಳನ್ನು ಸಂಗ್ರಹಿಸಿದ್ದು ಆದು ತಮ್ಮ ಸ್ವಾಧೀನದಲ್ಲಿದೆ. ಈ ಶುಲ್ಕವನ್ನು ಕೆ.ಎಸ್.ಆರ್.ಟಿ.ಸಿ. ನೌಕರರಿಂದ ಯಾವಾಗ ವಸೂಲು ಮಾಡಲು ಶುರುಮಾಡಿದ್ದೀರಿ ಈ ನಿಧಿಗೆ ಸರ್ಕಾರದಿಂದ ಏನಾದರೂ ದೇಣಿಗೆಯನ್ನು ಕೊಡುತ್ತಿದ್ದೀರಾ ಯಾವಾಗ ಈ ಕಾರ್ಯಕ್ರಮವನ್ನು ಆರಂಭಿಸಿದ್ದೀರಿ ಎಂಬುದನ್ನು ಹೇಳುತ್ತೀರಾ

ಶ್ರೀ ಕೆ. ಯಂಕಟಪ್ಪ(ಸಾರಿಗೆ ಮತ್ತು ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ).—ಇದು ೧೯೭೮ ರಿಂದ ಪ್ರಾರಂಭವಾಯಿತು. ಈ ನೌಕರರ ಮಕ್ಕಳ ಶಿಕ್ಷಣದ ನಿಧಿಯಲ್ಲಿ ಸಂಗ್ರಹವಾಗಿರುವ ೧೫,೧೯,